ಕನ್ನಡ ಪೋಸ್ಟ್
ಇದು ಸುದ್ದಿ ವಿಳಾಸ
KANNADA POST
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನ ಪತ್ರಿಕೆ Kannada Daily
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 139 | Pages. 2 | Date: 04-04-2025, FRIDAY RNI NO: KARKAN/2024/89601
ಸಂಪುಟ : 01 - ಸಂಚಿಕೆ : 139 - ಪುಟಗಳು : 2 - 04 ಏಪ್ರಿಲ್ 2025 ಶುಕ್ರವಾರ Ph: 8762954248 ದರ : ₹1

# ಸಂಚಾರಕ್ಕೆ ಸಂಚಕಾರ ತರುತ್ತಿವೆ ಮಲೆನಾಡಿನ ರಸ್ತೆಗಳು

## 3 ಕೋಟಿ ರೂ. ಅನುದಾನ ನೀಡದ ಸರ್ಕಾರ

## ಮಳೆಗೆ ಮತ್ತಷ್ಟು ಕುಸಿಯುವ ಆತಂಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅತಿವೃಷ್ಟಿ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅನುದಾನ ಬಿಡುಗಡೆ ಮಾಡಬೇಕಿದ್ದ ಸರ್ಕಾರ ದಿವ್ಯ ನಿರ್ಲಕ್ಷ್ಯ ವಹಿಸಿರುವ ಪರಿಣಾಮ ಕಳೆದ ವರ್ಷದ ಮಳೆಗೆ ಕುಸಿದ ರಸ್ತೆಗಳು ರಿಪೇರಿಯಾಗದೆ ಸಂಚಾರಕ್ಕೆ ಸಂಚಕಾರ ತರುತ್ತಿವೆ.

ಸಕಲೇಶಪುರ ತಾಲ್ಲೂಕು ಒಂದರಲ್ಲೇ ಹತ್ತು ಕಡೆ ರಸ್ತೆ ಕುಸಿದಿದ್ದು ಆಗ ಅಳವಡಿಸಿದ್ದ ಬ್ಯಾರಿಕೇಡ್‌ಗಳು ಹಾಗೆಯೇ ಇವೆ. ರಸ್ತೆ ದುರಸ್ತಿಯಲ್ಲಿದೆ ಎಂಬ ಸೂಚನಾ ಫಲಕಗಳು ಇಂದಿಗೂ ಗೋಚರಿಸುತ್ತಿವೆ. ತಾಲ್ಲೂಕಿನ ರಸ್ತೆ ಕಾಮಗಾರಿಗೆ 3 ಕೋಟಿ ರೂ. ಅನುದಾನ ನೀಡುವಂತೆ ಲೋಕೋಪಯೋಗಿ ಇಲಾಖೆ ಕೋರಿತ್ತು. ವರ್ಷವಾದರೂ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿಲ್ಲ.

ತಾಲ್ಲೂಕಿನ ತಂಬಲಗೇರಿ ಗ್ರಾಮದ ಸೋಮವಾರಪೇಟೆ-ಸಕಲೇಶಪುರ ಮುಖ್ಯ ರಸ್ತೆ ದುರಸ್ತಿ ಮಾಡದೆ ಹಾಗೆ




ಬಿಟ್ಟಿರುವುದರಿಂದ ವಾಹನ ಸವಾರರು ಜೀವ ಭಯದಲ್ಲೇ ಸಂಚರಿಸುವಂತಾಗಿದೆ. ನಿರ್ಲಕ್ಷ್ಯ ಧೋರಣೆ ಮುಂದುವರೆದರೆ ಈ ವರ್ಷದ ಮಳೆಗಾಲದಲ್ಲಿ ರಸ್ತೆ ಸಂಪೂರ್ಣ ಕೊಚ್ಚಿ ಹೋಗುವ ಆತಂಕವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ. ಹಾಸನ-ಕೊಡಗು ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದೆ. ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. 2024ರ ಸೆಪ್ಟೆಂಬರ್‌ನಲ್ಲಿ ಸುರಿದ ಭಾರೀ ಮಳೆಗೆ ರಸ್ತೆ ಕೊಚ್ಚಿ ಹೋಗಿತ್ತು. ಆಗ ಬ್ಯಾರಿಕೇಡ್ ಅಳವಡಿಸಿ ರಸ್ತೆ ಬಂದ್ ಮಾಡಲಾಗಿತ್ತು. ಟಾರ್ಪಾಲ್ ಹಾಕಿ ಮತ್ತಷ್ಟು ಮಣ್ಣು ಕುಸಿಯದಂತೆ ಎಚ್ಚರ ವಹಿಸಲಾಗಿತ್ತು. ಒಂದೆರಡು ಬಾರಿ ಮಳೆ ಸುರಿದರೆ ರಸ್ತೆ ಕುಸಿಯುವ ಆತಂಕ ಹೆಚ್ಚಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ರಿಪೇರಿಗೆ ಮುಂದಾಗಬೇಕಿದೆ. ಅಂದಾಜು 60 ಮೀಟರ್‌ನಷ್ಟು ಉದ್ದ ಹಾಗು 5 ಅಡಿ ಎತ್ತರ ರಸ್ತೆ ಕುಸಿದಿದ್ದು ಸ್ಥಳೀಯರೇ ಬ್ಯಾರಿಕೇಡ್‌ಗಳನ್ನು ಪಕ್ಕಕ್ಕೆ ಸರಿಸಿ ವಾಹನ ಚಲಾಯಿಸುತ್ತಿದ್ದಾರೆ. ಕಾರು, ಬೈಕ್‌ಗಳ ಸಂಚಾರಕ್ಕೆ ಸದ್ಯ ಸಮಸ್ಯೆಯಿಲ್ಲವಾದರೂ ಬಸ್, ಲಾರಿಯಂತಹ ದೊಡ್ಡ ಗಾತ್ರದ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಅನಾಹುತ ಕಟ್ಟಿಟ್ಟ ಬುತ್ತಿ. ರಾತ್ರಿ ವೇಳೆ ವೇಗವಾಗಿ ಬಂದರೆ ಅಪಘಾತವಾಗುವುದು ಖಚಿತ.

> ಸಕಲೇಶಪುರ ತಾಲ್ಲೂಕಿನ ವಿವಿಧೆಡೆ 10 ಕಡೆ ಈ ರೀತಿ ರಸ್ತೆ ಕುಸಿದಿದ್ದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸರ್ವೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದರು. ಅತಿವೃಷ್ಟಿ ಪರಿಹಾರ ಯೋಜನೆಯಡಿ ತಕ್ಷಣವೇ ಅನುದಾನ ಬಿಡುಗಡೆಯಾಗುತ್ತದೆ ಎಂಬ ನಿರೀಕ್ಷೆ ಅಧಿಕಾರಿಗಳದ್ದಾಗಿತ್ತು. ಜಿಲ್ಲಾಧಿಕಾರಿ ಅವರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದರೂ ಕಂದಾಯ ಇಲಾಖೆಯಿಂದ ಕಡತ ಪರಿಶೀಲನೆ ಹಂತದಲ್ಲಿದೆ ಎಂಬ ಉತ್ತರ ಬಂದಿದೆ. ಹೀಗಾಗಿ ಕಾಮಗಾರಿ ವರ್ಷದಿಂದ ಆರಂಭವನ್ನೇ ಪಡೆದಿಲ್ಲ. ಅನುದಾನ ಇಲ್ಲದೆ ಏನೂ ಮಾಡಲು ಸಾಧ್ಯವಿಲ್ಲ. ತಂಬಲಗೇರಿ ರಸ್ತೆಯಲ್ಲಿ ವಾಹನಗಳು ಸಂಚರಿಸಬಹುದು. ಉಳಿದ ಹಲವು ಕಡೆ ರಸ್ತೆ ಭಾರೀ ಹದಗೆಟ್ಟಿದೆ. ಹೆಚ್ಚು ಮಳೆ ಸುರಿದರೆ ಪರಿಸ್ಥಿತಿ ಹದಗೆಡಲಿದೆ ಎಂಬುದು ಎಲ್ಲರ ಆತಂಕವಾಗಿದೆ.

> ಅಧಿಕ ಮಳೆಯಿಂದ ಕಳೆದ ವರ್ಷ ಕುಸಿತ ಕಂಡ ರಸ್ತೆಗಳ ರಿಪೇರಿಗೆ 3 ಕೋಟಿ ರೂ. ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇಲ್ಲಿ ತನಕ ಹಣ ಬಿಡುಗಡೆಯಾಗಿಲ್ಲ. ಶಾಸಕರಿಗೂ ಹಲವು ಬಾರಿ ಮನವಿ ಮಾಡಿದ್ದೇವೆ.
>
> **– ಮುರುಗೇಶ್, ಎಇಇ, ಲೋಕೋಪಯೋಗಿ ಇಲಾಖೆ.**



### ಮನವಿಗೆ ಸಿಗದ ಸ್ಪಂದನೆ

ರಸ್ತೆ ಕುಸಿದ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಸಿಮೆಂಟ್ ಮಂಜು ಅವರು ಆದಷ್ಟು ಬೇಗ ದುರಸ್ತಿ ಮಾಡಿಸುವ ಭರವಸೆ ನೀಡಿದ್ದರು. ಆ ಬಳಿಕ ಗ್ರಾಮಸ್ಥರು ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಆದರೆ ಯಾವ ಪ್ರಯೋಜನವಾಗಿಲ್ಲ. ಅಧಿಕಾರಿಗಳಿಂದ ಅನುದಾನ ಕೊರತೆಯ ಉತ್ತರ ಮಾತ್ರ ಬರುತ್ತಿದೆ. ಹೀಗಾಗಿ ಗ್ರಾಮಸ್ಥರು ಆತಂಕದಲ್ಲೇ ಇದ್ದಾರೆ.

## ಸಿಲಿಂಡರ್ ಸ್ಫೋಟದಲ್ಲಿ ಗಾಯಗೊಂಡಿದ್ದ ಮತ್ತೊಬ್ಬ ಮಹಿಳೆಯೂ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಿಲಿಂಡರ್ ಸ್ಫೋಟವಾಗಿ ಮೂವರು ಮಹಿಳೆಯರು ಗಂಭೀರ ಗಾಯಗೊಂಡಿದ್ದ ಪ್ರಕರಣದಲ್ಲಿ ದುರಂತ ಮುಂದುವರಿದಿದ್ದು ಗುರುವಾರ ಕಡೇ ಗಾಯಾಳುವೂ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕೊಣನೂರು ಪಟ್ಟಣದ ಕುಂಚಿಟಗರ ಬೀದಿಯ ಮೀನಾಕ್ಷಿ (50) ಮೃತರು. ಚಿಕಿತ್ಸೆ ಫಲಿಸದೆ ಮಂಗಳವಾರ ಮಂಗಳ ಹಾಗೂ ಬುಧವಾರ ರಾಧಮ್ಮ ಅವರು ಅಸುನೀಗಿದ್ದರು.

ಇತ್ತೀಚೆಗೆ ನಿಧನರಾದ ಕರಿಯಮ್ಮ ಅವರ 11ನೇ ದಿನದ ಕಾರ್ಯ ಮಾಡಲು ಅವರ ಸೊಸೆಯಂದಿರಾದ ಮೀನಾಕ್ಷಿ, ರಾಧಮ್ಮ ಹಾಗೂ ಮಂಗಳ ಬಂದಿದ್ದರು. ಪಟ್ಟಣದ ಕುಂಚಿಟಗರ ಬೀದಿಯಲ್ಲಿರುವ ಎಲ್ಲರೂ ಪ್ರತ್ಯೇಕವಾಗಿ ವಾಸವಿದ್ದಾರೆ. ಮಾ. 31 ರಂದು ಕಾರ್ಯ ಇತ್ತಾದರೂ ಯುಗಾದಿ ದಿನವಾದ ಭಾನುವಾರ ಅಡುಗೆ ಮಾಡುತ್ತಿದ್ದರು. ಚಿಕ್ಕದಾದ ಮನೆಯಲ್ಲಿ ಸಿಲಿಂಡರ್ ಜೋಡಿಸಿ ಖಾದ್ಯಗಳ ತಯಾರಿಸುತ್ತಿದ್ದರು. ಬಾಂಡಲಿಯಲ್ಲಿ ಕಾದ ಎಣ್ಣೆ ಸಿಡಿದು ಸಿಲಿಂಡರ್ ಪೈಪ್



ಮೇಲೆ ಬಿದ್ದಿದ್ದರಿಂದ ಸ್ಫೋಟವಾಯಿತು ಎಂದು ಕುಟುಂಬಸ್ಥರು ಹೇಳುತ್ತಾರೆ. ಸಿಲಿಂಡರ್‌ನ ತಂತಿಯ ಗುಣಮಟ್ಟದ ಕೊರತೆಯೋ, ರೆಗ್ಯುಲೇಟರ್ ಅನ್ನು ಸರಿಯಾಗಿ ಜೋಡಿಸಿರಲಿಲ್ಲವೋ ಗೊತ್ತಿಲ್ಲ. ಒಂದೇ ಸಮನೆ ಬೆಂಕಿ ಹೊತ್ತಿದ್ದರಿಂದ ಅಲ್ಲಿಯೇ ಇದ್ದ ರಾಧಮ್ಮ, ಮೀನಾಕ್ಷಿ ಹಾಗೂ ಮಂಗಳ ಗಂಭೀರ ಗಾಯಗೊಂಡಿದ್ದರು. ಮನೆಗೆ ಬೆಂಕಿ ವ್ಯಾಪಿಸಿ ಹಾನಿಯಾಗಿತ್ತು. ತಕ್ಷಣವೇ ಗಾಯಾಳುಗಳನ್ನು ಪಟ್ಟಣದ ಸಮುದಾಯ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಮಂಗಳವಾರದಂದು ಮಂಗಳ, ಬುಧವಾರ ರಾಧಮ್ಮ ಹಾಗು ಗುರುವಾರ ಮೀನಾಕ್ಷಿ ಅವರು ಪ್ರಾಣ ಬಿಟ್ಟಿದ್ದಾರೆ.


ಮೃತ ಮಂಗಳಮ್ಮ ಅವರಿಗೆ ಇಬ್ಬರು ಪುತ್ರಿಯರು ಹಾಗು ಒಬ್ಬ ಮಗ ಇದ್ದಾರೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಪುತ್ರ ಚಿರಂತನ್ ಈಗಷ್ಟೇ ಬಿಎಸ್ಸಿ ಪದವಿ ಪೂರ್ಣಗೊಳಿಸಿದ್ದು ಉದ್ಯೋಗಾವಕಾಶದ ನಿರೀಕ್ಷೆಯಲ್ಲಿದ್ದಾನೆ. ಅಮ್ಮನ ಸಾವು ಆತನನ್ನು ವಿಚಲಿತಗೊಳಿಸಿದೆ. ರಾಧಮ್ಮ ಅವರ ಪತಿ ಕೋಮಾರಿಗೌಡ ಕೆಲವು ವರ್ಷಗಳ ಹಿಂದೆ ಮೃತಪಟ್ಟಿದ್ದು ಅವರಿಗೆ ಮಕ್ಕಳಿಲ್ಲ. ಗುರುವಾರ ಮೃತಪಟ್ಟ ಮೀನಾಕ್ಷಿ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ವಿವಾಹ ಮಾಡಿಕೊಡಲಾಗಿದೆ.

ಆಘಾತದ ಸುದ್ದಿ ತಿಳಿದ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರು ಗುರುವಾರ ಮೃತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದರು. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮೃತರ ಕುಟುಂಬಸ್ಥರಿಗೆ ಪರಿಹಾರ ಕಲ್ಪಿಸಲು ಕ್ರಮ ವಹಿಸಲಾಗಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗುವುದು. ರಾಧಮ್ಮ ಅವರ ಪುತ್ರ ಚಿರಂತನ್ ಉನ್ನತ ವ್ಯಾಸಂಗ ಮಾಡಲು ಆಸಕ್ತಿ ತೋರಿದರೆ ಸಹಾಯ ಮಾಡಲಾಗುವುದು. ನೊಂದ ಕುಟುಂಬಗಳ ಜೊತೆ ಜಿಲ್ಲಾಡಳಿತ ಇರುತ್ತದೆ ಎಂದರು.

> ಸಿಲಿಂಡರ್ ಸ್ಫೋಟವಾಗಿ ಮೂವರು ಮಹಿಳೆಯರು ಮೃತಪಟ್ಟಿರುವುದು ದು:ಖದ ಸಂಗತಿ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕುಟುಂಬಸ್ಥರಿಗೆ ಪರಿಹಾರ ಕೊಡಿಸಲು ಪ್ರಯತ್ನಿಸಲಾಗುವುದು. ನೊಂದ ಕುಟುಂಬಗಳ ಜೊತೆ ಜಿಲ್ಲಾಡಳಿತ ಇರುತ್ತದೆ.
>
> **– ಸಿ. ಸತ್ಯಭಾಮ, ಜಿಲ್ಲಾಧಿಕಾರಿ**



## ಗಟ್ಟಿ ಕಥೆಯಿಲ್ಲದೆ ಸೊರಗುತ್ತಿರುವ ಸಿನಿಮಾಗಳು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿಂದಿನ ಕಾಲದ ಚಲನಚಿತ್ರಗಳಿಗೂ ಪ್ರಸ್ತುತ ಬಿಡುಗಡೆಯಾಗುತ್ತಿರುವ ಸಿನಿಮಾಗಳು ಅಜಗಜಾಂತರ ವ್ಯತ್ಯಾಸವಿದೆ. ಗಟ್ಟಿ ಕಥೆಗಳಿಲ್ಲದೆ ಸಿನಿಮಾ ಕ್ಷೇತ್ರ ಸೊರಗುತ್ತಿದೆ ಎಂದು ಲೇಖಕಿ ಮಮತ ಪ್ರಭು ಹೇಳಿದರು.

ನಗರದ ಎ.ವಿ. ಕಾಂತಮ್ಮ ಮಹಿಳಾ ಕಾಲೇಜು, ಕನ್ನಡ ಸಂಘ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ ದೊಡ್ಡಮನೆ ಆನಂದ್ ಅವರ ನಾಲ್ಕು ಗ್ರಂಥಗಳಾದ ಆನೆ ನಡೆದಿದ್ದೇ ಹಾದಿ, ಮಿನುಗುತಾರೆ, ಚಿಕ್ಕಮಗಳೂರಿನಲ್ಲಿ ಬಂಗಾರದ ಮನುಷ್ಯ ಡಾ. ರಾಜ್ ಕೃತಿ ಪರಿಚಯ ಹಾಗು ದೊಡ್ಮನೆ ಆನಂದ್ ಅವರ ಸಮಗ್ರ ಪರಿಚಯ ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

ನೊಂದ ಸಮುದಾಯಗಳಿಗೆ ಸಾಂತ್ವನ ಹೇಳುವುದರ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುವ ಕೆಲಸ ಪುಸ್ತಕಗಳಿಂದ ಆಗಬೇಕು. ಮಾತೃ ಭಾಷೆ ಕನ್ನಡದಲ್ಲೇ ಓದಿ ಅದರಲ್ಲೇ ಉದ್ಯೋಗ ಮಾಡಬೇಕೆಂದು ಆಸೆ ಇಟ್ಟುಕೊಂಡಿರುವ ವಿದ್ಯಾರ್ಥಿಗಳನ್ನು ನೋಡುವುದಕ್ಕೆ ಸಂತೋಷವಾಗುತ್ತದೆ ಎಂದರು. ಮಿನುಗುತಾರೆ ಕೃತಿ ಸಿನಿಮಾ ಗುಣ ಹೊಂದಿದೆ. ದೊಡ್ಮನೆ ಆನಂದ್ ಅವರ ಕಾದಂಬರಿಯಲ್ಲಿ ಸಿನಿಮಾ ಮಾಡಬಹುದಾದ ಗುಣಗಳಿವೆ ಎಂದರು.

ಪ್ರಸ್ತುತ ಸಿನಿಮಾಗಳ ಬಗ್ಗೆ ಮಾತನಾಡುವುದು ವ್ಯರ್ಥ ಎನಿಸುತ್ತದೆ. ಹಿಂದಿನ, ಇಂದಿನ ಅಭಿರುಚಿ ಬೇರೆ ಬೇರೆಯಾಗಿದೆ. ಕಾಲದಿಂದ ಕಾಲಕ್ಕೆ ಬದಲಾವಣೆ ಕಾಣಬಹುದು. ಮುಂದೆಯೂ ಇದೇ ರೀತಿ ಆಗಬಹುದು ಎಂದು ಅಭಿಪ್ರಾಯಪಟ್ಟರು.

ನ್ಯಾಯ ಕೊಡಲು ಸಾಧ್ಯವಾಗದೆ ಇದ್ದರೆ, ಒಂದು ಕಾದಂಬರಿ ಇಲ್ಲವೇ ಒಂದು ಕಥೆ, ಕವನ ಯಾವುದಾದರೂ ಒಂದು ವರ್ಗಕ್ಕೆ ಸಾಂತ್ವನವನ್ನಾದರೂ ಕೊಡಬೇಕು ಮತ್ತು ಸಂತೋಷವನ್ನಾದರೂ ಕೊಡಬೇಕು. ಅಂತಹ ಉದ್ದೇಶವನ್ನಿಟ್ಟುಕೊಂಡು ಸಾಹಿತ್ಯ ಮಾಡುವುದು ಬಹಳ ಮುಖ್ಯ ಎಂದು ಸಲಹೆ ನೀಡಿದರು.

ಆನಂದ್ ಅವರ ಸಮಗ್ರ ಸಾಹಿತ್ಯ ಪರಿಚಯ ಮಾಡಿದ ಸಾಹಿತಿ ಮೇಟಿಕೆರೆ ಹಿರಿಯಣ್ಣ, ಕೃತಿ ಮಾರ್ಗದರ್ಶನ ನೀಡುತ್ತದೆ. ತಿರುವು ಎಂಬುದು ಕಥೆ ಕಾದಂಬರಿಯ ಲಕ್ಷಣ, ಕಥೆ ಬರೆಯಬಹುದು ಆದರೆ ಕಾದಂಬರಿ ಬರೆಯುವುದು ಸುಲಭವಲ್ಲ. ಹಿಂದಿನ ಹಾಡುಗಳೆಲ್ಲಾ ಸಾಹಿತ್ಯಿಕವಾಗಿದ್ದವು ಹಾಗು ಅರ್ಥಪೂರ್ಣವಾಗಿದ್ದವು. ಆಸಕ್ತಿ ಇದ್ದರೇ ವಿದ್ಯಾರ್ಥಿಗಳು ಹಲವಾರು ಭಾಷೆ ಕಲಿಯಬಹುದು.

ಇಂದು ಕೃಷಿಯಲ್ಲಿ ವಿಮುಕ್ತರಾಗುವ ವೇಳೆ ಆನಂದ್ ತಮ್ಮ ಬರಹದಲ್ಲಿ ಕೃಷಿ ಬಗ್ಗೆ ಬರೆದಿದ್ದಾರೆ. ಸರಕಾರದಿಂದ ಕೃಷಿಗೆ ಇಲ್ಲಿ ಪ್ರೋತ್ಸಾ ಹವಿಲ್ಲ.

ರೈತರ ಬವಣೆಯನ್ನು ಈ ಪುಸ್ತಕದಲ್ಲಿ ತಿಳಿಸಲಾಗಿದೆ ಎಂದರು.



ಹಾಸನ: ತಾಲ್ಲೂಕಿನ ಮಲ್ಲೇನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ. ಸ್ವರೂಪ್ ಗುರುವಾರ ಭೂಮಿಪೂಜೆ ನೆರವೇರಿಸಿದರು. ರೈತರು, ಸಾರ್ವಜನಿಕರು, ಜೆಡಿಎಸ್ ಮುಖಂಡರು ಇದ್ದರು.

## ಹಣ ಕೇಳಿದ್ದಕ್ಕೆ ಚಾಕುವಿನಿಂದ ಇರಿತ

ಬೇಲೂರು: ತನಗೆ ಕೊಡಬೇಕಿದ್ದ ಹಣವನ್ನು ಪದೆ ಪದೇ ಕೇಳುತ್ತಿದ್ದ ಎಂಬ ಕಾರಣಕ್ಕೆ ಅಣ್ಣನೇ ತಮ್ಮನಿಗೆ ಚಾಕುವಿನಿಂದ ಇರಿದು ಗಂಭೀರ ಗಾಯಗೊಳಿಸಿದ್ದಾನೆ.

ತಾಲ್ಲೂಕಿನ ಹಗರೆ ಗ್ರಾಮದಲ್ಲಿ ಘಟನೆ ನಡೆದಿದ್ದು ಚಂದ್ರ ಗಾಯಾಳು. ಸಹೋದರ ವೀರಭದ್ರ ಎಂಬಾತ ಹಲ್ಲೆ ನಡೆಸಿದ್ದಾನೆ. ಚಂದ್ರ ಅವರಿಗೆ ವೀರಭದ್ರ 7 ಲಕ್ಷ ರೂ. ಹಣ ಕೊಡಬೇಕಿತ್ತು. ಅದಕ್ಕಾಗಿ ಚಂದ್ರ ಪದೆ ಪದೇ ಕರೆ ಮಾಡುವುದು ಹಾಗೂ ಮನೆಗೆ ಭೇಟಿ ನೀಡುತ್ತಿದ್ದರು. ಬುಧವಾರ ಹಗರೆ ಗ್ರಾಮದಲ್ಲಿರುವ ಕಾಫಿ ಡೇಗೆ ಕರೆಸಿಕೊಂಡ ವೀರಭದ್ರ ಇಲ್ಲಿ ಬೇಡ ಮನೆ ಹತ್ತಿರ ಬಾ ಅಲ್ಲೇ ಕೊಡುತ್ತೇನೆಂದು ಸ್ವಲ್ಪ ದೂರ ಕರೆದುಕೊಂಡು ಹೋಗಿದ್ದಾನೆ.

ಅರ್ಧ ದಾರಿ ಕ್ರಮಿಸುತ್ತಿದ್ದಂತೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಜೇಬಿನಿಂದ ಚಾಕು ತೆಗೆದು ಕುತ್ತಿಗೆಗೆ ಇರಿಯಲು ಮುಂದಾಗಿದ್ದಾನೆ. ಅಪಾಯದ ಮುನ್ಸೂಚಣೆ ಅರಿತ ಚಂದ್ರ ಕತ್ತು ಬಗ್ಗಿಸಿದ್ದರಿಂದ ಎಡಕಿವಿ ಮೇಲ್ಭಾಗ ಗಂಭೀರ ಗಾಯವಾಗಿದೆ. ಗಲಾಟೆ ವಿಚಾರ ತಿಳಿದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ದೌಡಾಯಿಸಿ ಜಗಳ ಬಿಡಿಸಿದ್ದಾರೆ. ಚಂದ್ರ ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆತಯುತ್ತಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟೀಕಾಕಾರರಿಗೆ ನನ್ನ ಕೆಲಸಗಳೇ ಉತ್ತರ : ಕೆ.ಎಂ.ಶಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಎತ್ತಿನಹೊಳೆ ಯೋಜನೆ ಅವೈಜ್ಞಾನಿಕ ಎಂದು ಜರಿದಿದ್ದ ಅನೇಕ ನಾಯಕರು, ಈಗ ಏನು ಹೇಳುತ್ತಾರೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಪ್ರತಿಪಕ್ಷ ನಾಯಕರಿಗೆ ತಿರುಗೇಟು ನೀಡಿದರು.

ಚನ್ನರಾಯಪಟ್ಟಣ ತಾಲ್ಲೂಕು ಗಡಿಯಿಂದ ಅರಸೀಕೆರೆ ವರೆಗೆ 20 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ರಾಜ್ಯ ಹೆದ್ದಾರಿ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಎತ್ತಿನಹೊಳೆ ಕಾಮಗಾರಿ ಪ್ರಗತಿಯಲ್ಲಿದ್ದು, ಒಂದೆರಡು ತಿಂಗಳಲ್ಲಿ ತಾಲ್ಲೂಕಿನ ಕೆರೆಕಟ್ಟೆಗಳಿಗೆ ಎತ್ತಿನಹೊಳೆ ನೀರು ಬರಲಿದೆ. ಇದು ಟೀಕಾಕಾರರಿಗೆ ನಾನು ನೀಡುವ ಉತ್ತರ ಎಂದರು.

ಕ್ಷೇತ್ರದ ಮತದಾರರು ನೀಡಿರುವ ರಾಜಕೀಯ ಶಕ್ತಿ ಬಳಸಿಕೊಂಡು ಎಲ್ಲರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೇನೆ. ನೀವು ನೀಡಿರುವ ಮತಕ್ಕೆ ಕಪ್ಪು ಚುಕ್ಕೆ ತರುವ ಯಾವುದೇ ಕೆಲಸ ನಾನು ಮಾಡುವುದಿಲ್ಲ ಎಂದು ವಾಗ್ದಾನ ಮಾಡಿದರು.

ಪ್ರತಿ ಲೀಟರ್ ಹಾಲಿಗೆ ಹೆಚ್ಚಿಸಿರುವ 4 ರೂ. ರೈತರಿಗೆ ತಲುಪಲಿದೆ. ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲು ಸರ್ಕಾರ ಈ ನಿರ್ಧಾರ ಕೈಗೊಂಡಿದೆ.



ಹಾಲಿನ ದರ ಏರಿಕೆ ಹಿಂದೆ ರೈತಪರ ಕಾಳಜಿ ಇದೆ. ಗ್ಯಾರಂಟಿ ಯೋಜನೆಗಳು ಬಡ ಹಾಗು ಮಧ್ಯಮ ವರ್ಗದವರು ಹಾಗು ಕೋಟ್ಯಾಂತರ ಜನರ ಬದುಕಿಗೆ ಭದ್ರತೆ ಒದಗಿಸಿವೆ. ಅದರಿಂದ ಲಕ್ಷಾಂತರ ಕುಟುಂಬಗಳಿಗೆ ಒಳಿತಾಗಿದೆ. ಅದನ್ನು ಸಹಿಸದ ವಿಪಕ್ಷದವರು ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಪಂಚ ಗ್ಯಾರಂಟಿಯಿಂದ ಅಭಿವೃದ್ಧಿಗೆ ಅಡ್ಡಿಯಾಗಿಲ್ಲ. ಕಳೆದ ಒಂದು ತಿಂಗಳಲ್ಲೇ ಅರಸೀಕೆರೆ ಕ್ಷೇತ್ರದಲ್ಲಿ ಸುಮಾರು 50 ಕೋಟಿ ರೂ.ಗೂ ಅಧಿಕ ವೆಚ್ಚದ ವಿವಿಧ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಇನ್ನೂ ನೂರಾರು ಕೋಟಿ ಅನುದಾನ ತಂದು ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಶ್ರಮಿಸುವೆ. ಮುಂದಿನ ತಿಂಗಳು ಅರಸೀಕೆರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಲಿದ್ದು, ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಲೋಕಾರ್ಪಣೆ ಮಾಡಲಿದ್ದಾರೆ. ಜೊತೆಗೆ ಇತರೆ ಅಭಿವೃದ್ಧಿ ಕಾಮಗಾರಿಗಳಿಗೂ ಚಾಲನೆ ನೀಡುವರು ಎಂದರು.

ಗಂಡಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೆಟ್ರೋ ಬಾಬು ಮಾತನಾಡಿ, ಕ್ಷೇತ್ರದ ಜನರ ಬೇಕು-ಬೇಡ ಅರಿವು, ಅವರ ಆದ್ಯತೆ ಮೇರೆಗೆ ಅಭಿವೃದ್ಧಿ ಕೆಲಸ ಮಾಡುತ್ತಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿರುವ ಶಾಸಕರ ಕಾರ್ಯವೈಖರಿ ಇತರರಿಗೆ ಮಾದರಿ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಹುಚ್ಚೇಗೌಡ, ಕಾಂಗ್ರೆಸ್ ಮುಖಂಡರಾದ ಅಯ್ಯಣ್ಣ, ಮಲ್ಲೇಶಣ್ಣ, ರಾಮಚಂದ್ರು, ಮಂಜುರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ಜಯರಾಂ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಆಗ್ರೋಬಾಬು ಇತರರು ಇದ್ದರು.

## ಧಾರಾಕಾರ ಮಳೆಗೆ ಜನಜೀವನ ಅಸ್ತವ್ಯಸ್ತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಗುರುವಾರ ಸುರಿದ ಭಾರೀ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿತು.



ಹಾಸನ ಜಂಕ್ಷನ್ ರೈಲ್ವೆ ನಿಲ್ದಾಣದಲ್ಲಿ ಭಾರಿ ಪ್ರಮಾಣದಲ್ಲಿ ಸೋರಿಕೆಯಾಗಿ ಪ್ರಯಾಣಿಕರು ಪರದಾಡುವಂತಾಯಿತು. ಪ್ಲಾಟ್‌ಫಾರ್ಮ್ ಸಂಪೂರ್ಣ ಜಲಾವೃತವಾಯಿತು. ಮಳೆ ನೀರಿನಲ್ಲಿಯೇ ರೈಲಿಗಾಗಿ ಪ್ರಯಾಣಿಕರು ಕಾಯಬೇಕಾಯಿತು. ನಿಲ್ದಾಣದಲ್ಲಿ ಎಲ್ಲೆಡೆ ನೀರು ತುಂಬಿದೆ. ಕುಳಿತುಕೊಳ್ಳಲು ಜಾಗವಿಲ್ಲ, ಓಡಾಡಲೂ ಆಗುತ್ತಿಲ್ಲ. ಇದು ಯಾವ ರೀತಿಯ ಸೌಲಭ್ಯ ಎಂದು ಪ್ರಯಾಣಿಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.ಸಕಲೇಶಪುರ, ಆಲೂರು, ಅರಕಲಗೂಡು, ಹೊಳೆನರಸೀಪುರ ಭಾಗದಲ್ಲೂ ಧಾರಕಾರ ಮಳೆ ಸುರಿಯಿತು.

### ರಸ್ತೆಗಳು ಜಲಾವೃತ

ನಿರಂತರ ಮಳೆಯಿಂದ ಹಾಸನದ ಎಲ್ಲಾ ರಸ್ತೆಗಳು ಜಲಾವೃತವಾದವು. ಮಧ್ಯಾಹ್ನ 2.30ಕ್ಕೆ ಆರಂಭವಾದ ಜೋರು ಮಳೆ ಸಂಜೆ 7ರ ವರೆಗೆ ಜೋರಾಗಿ ಸುರಿಯಿತು. ಮಳೆಯಿಂದಾಗಿ ಸಾರ್ವಜನಿಕರು ಪರದಾಡುವಂತಾಯಿತು. ಬಿಎಂ ರಸ್ತೆ, ಕಸ್ತೂರ ಬಾ ರಸ್ತೆ, ಎಂಜಿ ರಸ್ತೆ, ಸ್ಲೇಟರ್ ಜನರು ಆಶ್ರಯಕ್ಕಾಗಿ ಪಕ್ಕದ ಕಟ್ಟಡಗಳತ್ತ ಓಡಿದರು. ಮತ್ತೆ ಕೆಲವರು ಆಟೋಗಳ ಮೊರೆ ಹೋದರು.



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ದಿಡಗ ಹಳೆ ಗ್ರಾಮದ ರೈತ ಡಿ. ರಂಗಸ್ವಾಮಿ ಅವರು ಸಾಕಿರುವ ಮೇಕೆಯು ಗುರುವಾರ ಎರಡು ಮರಿಗಳಿಗೆ ಜನ್ಮ ನೀಡಿದ್ದು ಒಂದು ಮರಿಗೆ ಮುಂಭಾಗದ ಎಡಗಾಲು ಇಲ್ಲ. ಮರಿಯು ಆರೋಗ್ಯಯುತವಾಗಿದೆ.

# ವಕ್ಫ್ ಕಾಯ್ದೆ ತಿದ್ದುಪಡಿ: ಸಾಧಕ-ಬಾಧಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಳುವ ಪಕ್ಷದ ಉತ್ಸಾಹ ಮತ್ತು ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆ ಸಂಸತ್‌ನಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆ ಅಂಗೀಕರವಾಗಿದೆ. ದೇಶಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ವಕ್ಫ್ ಮಸೂದೆಯಿಂದ ಭವಿಷ್ಯದಲ್ಲಿ ಆಗುವ ಪರಿಣಾಮಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಈ ತಿದ್ದುಪಡಿಯು ವಕ್ಫ್ ಆಸ್ತಿಗಳ ಆಡಳಿತ, ನಿರ್ವಹಣೆ ಮತ್ತು ಸಂರಕ್ಷಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರುವ ಗುರಿಯನ್ನು ಹೊಂದಿದೆ.




## ತಿದ್ದುಪಡಿಯ ಮುಖ್ಯ ಉದ್ದೇಶ

- ವಕ್ಫ್ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವುದು, ಪಾರದರ್ಶಕತೆಯನ್ನು ಹೆಚ್ಚಿಸುವುದು ಮತ್ತು ದುರುಪಯೋಗವನ್ನು ತಡೆಗಟ್ಟುವುದು.
- ಆರು ತಿಂಗಳೊಳಗೆ ಎಲ್ಲಾ ವಕ್ಫ್ ಆಸ್ತಿಗಳನ್ನು ಕೇಂದ್ರೀಯ ಪೋರ್ಟಲ್‌ನಲ್ಲಿ ನೋಂದಾಯಿಸುವ ಕಡ್ಡಾಯ ವಿಧಾನ.
- ಜಿಲ್ಲಾ ಕಲೆಕ್ಟರ್‌ಗಳಿಗೆ ಸರ್ವೇ ನಡೆಸುವ ಅಧಿಕಾರ ನೀಡುವುದು.
- ವಕ್ಫ್ ಮಂಡಳಿಗಳಲ್ಲಿ ಮಹಿಳೆಯರು ಮತ್ತು ಮುಸ್ಲಿಮೇತರರ ಸೇರ್ಪಡೆಗೆ ಅವಕಾಶ ಕಲ್ಪಿಸುವುದು.
- ತೀರ್ಪುಗಳ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಸೌಲಭ್ಯ ಒದಗಿಸುವುದು.

## ಸಕಾರಾತ್ಮಕ ಪರಿಣಾಮಗಳು

- ಪಾರದರ್ಶಕತೆ ಮತ್ತು ಜವಾಬ್ದಾರಿ: ಡಿಜಿಟಲೀಕರಣದ ಮೂಲಕ ವಕ್ಫ್ ಆಸ್ತಿಗಳ ದುರುಪಯೋಗ ಮತ್ತು ಅನಧಿಕೃತ ಅತಿಕ್ರಮಣ ತಡೆಗಟ್ಟಬಹುದು. ವಕ್ಫ್ ಮಂಡಳಿಗಳ ಆದಾಯ ಹೆಚ್ಚಾಗಿ, ಶಿಕ್ಷಣ, ಆರೋಗ್ಯ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಒದಗಿಸುವ ಸಾಧ್ಯತೆ.
- ಸಾಮಾಜಿಕ ಸಮ್ಮಿಲನ: ಮಹಿಳೆಯರು ಮತ್ತು ಮುಸ್ಲಿಮೇತರರನ್ನು ವಕ್ಫ್ ಮಂಡಳಿಗಳಲ್ಲಿ ಸೇರಿಸುವುದರಿಂದ ಆಡಳಿತದಲ್ಲಿ ವೈವಿಧ್ಯತೆ ಮತ್ತು ಸಮಾನತೆ ಉತ್ತೇಜಿತವಾಗಬಹುದು.
- ಕಾನೂನು ಪರಿಹಾರ: ಹೈಕೋರ್ಟ್‌ನಲ್ಲಿ ಮೇಲ್ಮನವಿ ಸೌಲಭ್ಯವು ಆಸ್ತಿ ವಿವಾದಗಳನ್ನು ಪರಿಹರಿಸಲು ಸರಳ ಮತ್ತು ಪರಿಣಾಮಕಾರಿ ಮಾರ್ಗ ಒದಗಿಸುತ್ತದೆ.

## ಋಣಾತ್ಮಕ ಅಂಶಗಳು

- ಸರ್ಕಾರದ ಮಧ್ಯಸ್ಥಿಕೆ: ಜಿಲ್ಲಾಧಿಕಾರಿಗಳಿಗೆ ಸರ್ವೆ ಅಧಿಕಾರ ನೀಡುವುದು ಮತ್ತು ಕೇಂದ್ರೀಯ ಪೋರ್ಟಲ್‌ನಲ್ಲಿ ನೋಂದಣಿ ಕಡ್ಡಾಯಗೊಳಿಸುವುದರಿಂದ ಸರ್ಕಾರದ ಹಸ್ತಕ್ಷೇಪಕ್ಕೆ ಕಾರಣವಾಗಬಹುದು. ಇದರಿಂದ ಧಾರ್ಮಿಕ ಸಂಸ್ಥೆಗಳ ಸ್ವಾಯತ್ತತೆ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ.
- ಧಾರ್ಮಿಕ ಸ್ವಾತಂತ್ರ್ಯದ ಪ್ರಶ್ನೆ: ಕೆಲವರು ಈ ಮಸೂದೆಯನ್ನು ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿಗೆ ಧಕ್ಕೆ ತರುವ ಪ್ರಯತ್ನವೆಂದು ಭಾವಿಸಿದ್ದಾರೆ. ವೈಯಕ್ತಿಕ ಕಾನೂನುಗಳ ಮೇಲೆ ಸರ್ಕಾರದ ನಿಯಂತ್ರಣ ಹೆಚ್ಚಾಗುವ ಸಾಧ್ಯತೆ ಇದೆ.
- ಸಮುದಾಯದಲ್ಲಿ ಗೊಂದಲ: ತಿದ್ದುಪಡಿಯ ವಿರುದ್ಧ ಆಕ್ಷೇಪ ವ್ಯಕ್ತಪಡಿಸುವವರು ಇದನ್ನು ಮುಸ್ಲಿಂ ಸಮುದಾಯದ ವಿರುದ್ಧದ ತಾರತಮ್ಯವೆಂದು ಪರಿಗಣಿಸುವ ಸಾಧ್ಯತೆ. ಇದರ ಪರಿಣಾಮವಾಗಿ, ಸಾಮಾಜಿಕ ಸೌಹಾರ್ದತೆಗೆ ಧಕ್ಕೆ ಉಂಟಾಗಬಹುದು.

## ಸಮಾಜದ ಮೇಲೆ ಪ್ರಭಾವ

ವಕ್ಫ್ ಆಸ್ತಿಗಳು ಭಾರತದಲ್ಲಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಮುಖ ಆರ್ಥಿಕ ಬೆಂಬಲ ಒದಗಿಸುತ್ತವೆ. ಈ ತಿದ್ದುಪಡಿಯು ಆಸ್ತಿಗಳ ಉತ್ತಮ ನಿರ್ವಹಣೆಗೆ ದಾರಿ ಮಾಡಿದರೆ, ಸಮುದಾಯದ ಅಭಿವೃದ್ಧಿಗೆ ಸಹಾಯವಾಗಬಹುದು. ಆದರೆ, ಸರ್ಕಾರದ ಹೆಚ್ಚಿನ ಮಧ್ಯಸ್ಥಿಕೆಯಿಂದ ಸಮುದಾಯದಲ್ಲಿ ಅಪನಂಬಿಕೆ ಮೂಡಿದರೆ, ಇದು ರಾಜಕೀಯ ಮತ್ತು ಸಾಮಾಜಿಕ ಒತ್ತಡಕ್ಕೆ ಕಾರಣವಾಗಬಹುದು. ಇದರಿಂದ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆ ತರುವ ಭರವಸೆ ಮೂಡಿದರೂ, ಧಾರ್ಮಿಕ ಸ್ವಾಯತ್ತತೆ ಮತ್ತು ಸಮುದಾಯದ ಭಾವನೆಗಳ ಮೇಲೆ ಪ್ರಶ್ನೆಗಳು ಉದ್ಭವಿಸುತ್ತವೆ. ಈ ತಿದ್ದುಪಡಿಯ ಯಶಸ್ಸು ಸರ್ಕಾರದ ಜಾರಿ ವಿಧಾನ ಮತ್ತು ಸಮುದಾಯದ ಸಹಕಾರದ ಮೇಲೆ ಅವಲಂಬಿತವಾಗಿದೆ. ಮುಂದಿನ ದಿನಗಳಲ್ಲಿ ಈ ಬದಲಾವಣೆಗಳು ದೀರ್ಘಕಾಲೀನವಾಗಿ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತವೆ ಎಂಬುದನ್ನು ಕಾದು ನೋಡಬೇಕಾಗಿದೆ.

# ಸರ್ಕಾರದ ಸವಲತ್ತು ಅರ್ಹರಿಗೆ ತಲುಪಲಿ



ಆಲೂರು: ವಿಕಲಚೇತನರಿಗೆ ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ಸಮರ್ಪಕವಾಗಿ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಸಲಹೆ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಅಲೀಮ ಕೊ ವತಿಯಿಂದ ಕೇಂದ್ರ ಸರ್ಕಾರದ ಸಿ.ಆರ್. ನಿಧಿಯಡಿ 9 ವಿಕಲಚೇತನರಿಗೆ ಒಂದು ಬ್ಯಾಟರಿ ಚಾಲಿತ ಸೈಕಲ್, ತ್ರಿಚಕ್ರ ವಾಹನ ಹಾಗೂ ಗಾಲಿ ಕುರ್ಚಿ ವಿತರಿಸಿ ಮಾತನಾಡಿ, ವಿಕಲಚೇತನರು ಮುಖ್ಯವಾಹಿನಿಗೆ ಬರಲಿ ಎಂಬ ಉದ್ದೇಶದಿಂದ ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಿದೆ. ಆದರೆ ಕೆಲ ಅರ್ಹರಿಗೆ ತಲುಪುತ್ತಿಲ್ಲ ಎಂಬ ಆರೋಪಗಳಿವೆ. ಹಾಗಾಗಿ ಅರ್ಹರನ್ನು ಗುರುತಿಸಿ ಸವಲತ್ತುಗಳನ್ನು ಕಲ್ಪಿಸಲು ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು ಎಂದರು.

ಅಂಗವಿಕಲರ ಶ್ರೇಯೋಭಿವೃದ್ಧಿಗೆ ಸರ್ಕಾರ ರೂಪಿಸಿರುವ ಕಾನೂನು, ಕಾಯ್ದೆಗಳನ್ನು ಮೊದಲು ತಿಳಿದುಕೊಂಡು, ವಿವಿಧ ಇಲಾಖೆಗಳಲ್ಲಿ ವಿಕಲಚೇತನ ಎಂದು ಗೊತ್ತಾದ ತಕ್ಷಣ, ಅಧಿಕಾರಿಗಳು ಸರ್ಕಾರದ ಸೌಲಭ್ಯಗಳನ್ನು ಚಾಚು ತಪ್ಪದೆ ನೀಡುವಂತಾಗಬೇಕು. ವಿಕಲಚೇತನರು ಅಸಮರ್ಥರು ಎನ್ನುವ ತಪ್ಪು ಕಲ್ಪನೆ ಬೇಡ. ಅವರಲ್ಲಿ ವಿಶೇಷ ಸಾಮರ್ಥ್ಯ ಇರುತ್ತದೆ ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್, ವಿಕಲಚೇತನ ಇಲಾಖೆ ಅಧಿಕಾರಿ ಅನುಪಮಾ, ತಾಲ್ಲೂಕು ಪಂಚಾಯಿತಿ ಅಧಿಕಾರಿ ಜಾಕಿರ್ ಹುಸೇನ್, ಅಂಗವಿಕಲ ಕಲ್ಯಾಣ ಇಲಾಖೆ ತೀರ್ಥಕ್ಷಾ, ವಿಕಲಚೇತನರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಎತ್ತಿನಹೊಳೆ ಕಾಮಗಾರಿಗೆ ರೈಲ್ವೆ ಇಲಾಖೆ ಗ್ರೀನ್ ಸಿಗ್ನಲ್

## ಬಹುದಿನಗಳ ಸಮಸ್ಯೆಗೆ ಸಿಕ್ಕಿತು ಪರಿಹಾರ : ಸಚಿವ ವಿ. ಸೋಮಣ್ಣ ಭೇಟಿ ಫಲಪ್ರದ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅರಸೀಕೆರೆ ತಾಲ್ಲೂಕಿನ ಹಬ್ಬನಘಟ್ಟ ನಿಲ್ದಾಣ ಹಾಗೂ ಮೈಲನಹಳ್ಳಿ ಸಮೀಪ ಎತ್ತಿನಹೊಳೆ ಕಾಮಗಾರಿಗೆ ಅಡ್ಡಿಪಡಿಸಿದ್ದ ರೈಲ್ವೆ ಇಲಾಖೆಯು ಹಲವು ಸುತ್ತಿನ ಸಭೆ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ನಿರ್ದೇಶನದ ಬಳಿಕ ಕೆಲಸ ಮುಂದುವರೆಸಲು ಹಸಿರು ನಿಶಾನೆ ತೋರಿದೆ.

ತಾಲ್ಲೂಕಿನ ಆಯಕಟ್ಟಿನ ಜಾಗಗಳಲ್ಲಿ ಒಂದಿಲ್ಲೊಂದು ಸಮಸ್ಯೆಯಿಂದ ಕಾಮಗಾರಿ ನಿಂತಿತ್ತು. ಎತ್ತಿನಹೊಳೆ ನಾಲೆ ನಿರ್ಮಾಣ ಕಾಮಗಾರಿಗೆ ರೈಲ್ವೆ ಇಲಾಖೆ ಹಸಿರು ನಿಶಾನೆ ತೋರಿರುವುದು ಬಯಲು ಸೀಮೆಯ ಜನರಲ್ಲಿ ಭರವಸೆ ಮೂಡಿಸಿದೆ. ಸದ್ಯದ ಬೆಳವಣಿಗೆಯಿಂದ ಬಹುಕಾಲದಿಂದ ಸ್ಥಗಿತಗೊಂಡಿದ್ದ ದೊಡ್ಡ ಮಟ್ಟದ ಕೆಲಸ ಮೊದಲ ಹಂತದಲ್ಲಿ ಹಬ್ಬನಘಟ್ಟ ಬಳಿ ಆರಂಭವಾಗಿದೆ. ಅರಸೀಕೆರೆ, ಹಾಸನ ಮಾರ್ಗವಾಗಿ ಮೈಸೂರು ಹಾಗೂ ಅರಸೀಕೆರೆ-ಬೆಂಗಳೂರು ಸಂಪರ್ಕಿಸುವ ರೈಲ್ವೆ ಮಾರ್ಗದಲ್ಲಿ ನಾಲೆ ಹಾದು ಹೋಗಬೇಕಿದ್ದ ಹಿನ್ನಲೆಯಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿತ್ತು. ತ್ವರಿತಗತಿಯಲ್ಲಿ ಕೆಲಸ ಪೂರ್ಣಗೊಳಿಸಲು ಪಣ ತೊಟ್ಟಿದ್ದ ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ಸಮಸ್ಯೆಯ ಗಂಭೀರತೆಯನ್ನು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ಗಮನಕ್ಕೆ ತಂದಿದ್ದರು. ಕೆಲ ದಿನಗಳ ಹಿಂದಷ್ಟೇ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿದ್ದ ಶಾಸಕ ಶಿವಲಿಂಗೇಗೌಡ ಹಾಗೂ ವಿಜೆಎನ್‌ಎಲ್ ಅಧಿಕಾರಿಗಳ ತಂಡ ವಸ್ತುಸ್ಥಿತಿ ಮನವರಿಕೆ ಮಾಡಿಕೊಟ್ಟಿತ್ತು. ತುಮಕೂರು, ಹಾಸನ ಉಭಯ ಜಿಲ್ಲೆಗಳ ಕುಡಿಯುವ ನೀರಿನ ಸಂಕಷ್ಟ ಆಲಿಸಿದ ಕೇಂದ್ರ ಸಚಿವರು ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾಮಗಾರಿ ಪೂರ್ಣಗೊಳಿಸಲು ಅನುವು ಮಾಡಿಕೊಡುವಂತೆ ಸೂಚಿಸಿದ್ದರು. ಅದರಿಂದಾಗಿ ಹಬ್ಬನಘಟ್ಟ ಗ್ರಾಮದ ಬಳಿ 72 ಮೀ. ಹಾಗೂ ಮೈಲನಹಳ್ಳಿ ಸಮೀಪ 60 ಮೀ. ಕಾಲುವೆ ತೆಗೆಯುವ ಕೆಲಸ ಶೀಘ್ರವೇ ಪೂರ್ಣಗೊಳ್ಳಲಿದೆ. ಬೃಹತ್ ಯೋಜನೆಗೆ ಎದುರಾಗಿದ್ದ ಬಹುದೊಡ್ಡ ತೊಡಕು ನಿವಾರಣೆಯಾಗಿರುವುದು ಮುಂಗಾರು ವೇಳೆಗೆ ಕೆರೆಗಳಿಗೆ ನೀರು ಹರಿಯುವ ವಿಶ್ವಾಸ ಹೆಚ್ಚಿದೆ.



ತಾಲ್ಲೂಕಿನಲ್ಲಿ 45 ಕಿ.ಮೀ. ಹಾದು ಹೋಗಿರುವ ಎತ್ತಿನಹೊಳೆ ನಾಲೆ ಹತ್ತು ಹಲವು ವಿಶೇಷತೆಗಳನ್ನು ಹೊಂದಿದೆ. ನೀರು ಸರಾಗವಾಗಿ ಗುರುತ್ವಾಕರ್ಷಣೆ ಮೂಲಕ ಹರಿಯುವಂತೆ ಕೋಡಿಮಠ ಬಳಿ 810 ಮೀ., ಮೈಲನಹಳ್ಳಿ ಗ್ರಾಮದ ಬಳಿ 750 ಮೀ. ಬೃಹತ್ ಸುರಂಗ ಕೊರೆಯಲಾಗಿದ್ದು 7 ಮೇಲ್ಗಾಲುವೆ, 60ಕ್ಕೂ ಹೆಚ್ಚು ಮೇಲ್ಸೇತುವೆಗಳು ಸೇರಿವೆ. ಅದಕ್ಕಾಗಿ 984 ಕೋಟಿ ರೂ. ಹಣ ಮೀಸಲಿರಿಸಲಾಗಿದ್ದು ಕೆಲಸ ಭಾಗಶಃ ಪೂರ್ಣಗೊಂಡಿದೆ.

ಸಕಲೇಶಪುರ ತಾಲ್ಲೂಕಿನ ಎತ್ತಿನಹಳ್ಳ, ಆಲೂರು, ಬೇಲೂರು ಮಾರ್ಗವಾಗಿ ಅರಸೀಕೆರೆ, ತಿಪಟೂರು, ಚಿಕ್ಕನಾಯ್ಕನಹಳ್ಳಿ, ಮಾರಿಕಣಿವೆ ಸಂಪರ್ಕ, ಕೊರಟಗೆರೆ ತಲುಪುವ ಬೃಹತ್ ನಾಲೆ ನಿರ್ಮಾಣ ಕಾರ್ಯ ಭೈರಗೊಂಡ್ಲು ಜಲಾಶಯ ತಲುಪಲಿದೆ. ಅಲ್ಲಿಂದ ಚಿಕ್ಕಬಳ್ಳಾಪುರ, ಕೊಲಾರ ಜಿಲ್ಲೆಯ ಹಲವು ತಾಲ್ಲೂಕಿನ ಕೆರೆಗಳಿಗೆ ಸಂಪರ್ಕ ಕಲ್ಪಿಸಲು ಯೋಜನೆ ರೂಪಿಸಲಾಗಿದೆ. ಇದೀಗ ಬಹುದೊಡ್ಡ ಕಾಮಗಾರಿಗೆ ಹಿಡಿದಿದ್ದ ಗ್ರಹಣ ಬಿಟ್ಟಿದ್ದು ಕಾಮಗಾರಿ ಬಿರುಸಿನಿಂದ ಸಾಗಿರುವುದು ಸಂತಸ ಮೂಡಿಸಿದೆ.

### ವ್ಯಾಜ್ಯ ಪ್ರದೇಶದಲ್ಲೂ ಕೆಲಸ

ಬಹುನಿರೀಕ್ಷಿತ ಎತ್ತಿನಹೊಳೆ ಯೋಜನೆಗೆ ಪ್ರಮುಖವಾಗಿ ಅಡ್ಡಿಯಾದ ಸಮಸ್ಯೆಗಳೆಂದರೆ ಒಂದು ಅರಣ್ಯ ಹಾಗೂ ರೈಲ್ವೆ ಇಲಾಖೆ ಜಾಗ ನೀಡದೆ ಇರುವುದು ಮತ್ತೊಂದು ಭೂ ಸಂತ್ರಸ್ತರ ಪರಿಹಾರ ವಿಚಾರ. ಈಗ ಆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತಾಗಿದೆ. ಭೂ ಪರಿಹಾರ ವ್ಯಾಜ್ಯದ ಹಿನ್ನೆಲೆಯಲ್ಲಿ ರೈತರು ಭೂಮಿ ಬಿಟ್ಟುಕೊಡಲು ತಗಾದೆ ತೆಗೆದಿದ್ದ ಮುದುಡಿ-ವೆಂಕಟಾಪುರ, ಕಲ್ಕೆರೆ ಹಾಗೂ ನಾಯಕನಕೆರೆ ಕಾವಲು ಗ್ರಾಮಗಳ ಸರಹದ್ದಿನ 3.5 ಕಿ.ಮೀ. ಅಂತರದ ಕೆಲಸವು ಸುಗಮವಾಗಿ ನಡೆಯುತ್ತಿದೆ.

# ವಚನ ಸಾಹಿತ್ಯಕ್ಕೆ ದಾಸಿಮಯ್ಯ ಕೊಡುಗೆ ಅಪಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದೇವರ ದಾಸಿಮಯ್ಯ ಅವರು ಕೇವಲ ಒಂದು ಜಾತಿ ಧರ್ಮಕ್ಕೆ ಸೀಮಿತರಾಗದೆ ಸಮಸ್ತ ಕುಲ ಕೋಟಿಗೆ ಸೇರಿದವರಾಗಿದ್ದಾರೆ, ಇವರು ವಚನ ಸಾಹಿತ್ಯಕ್ಕೆ ನೀಡಿರುವ ಕೊಡುಗೆ ಅಪಾರ ಎಂದು ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬುಧವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ನಗರದ ಆರ್.ಸಿ. ರಸ್ತೆಯಲ್ಲಿ ದೇವರ ದಾಸಿಮಯ್ಯ ಅವರ ಸರ್ಕಲ್ ನಿರ್ಮಿಸಿರುವುದು ಸಂತಸದ ವಿಷಯವಾಗಿದೆ.

ಕ್ರಿಯೆ ಜ್ಞಾನದಿಂದ ಉತ್ತಮ ಮನುಷ್ಯರಾಗಬಲ್ಲಿರಿ ಎಂದು ದೇವರ ದಾಸಿಮಯ್ಯ ಅವರು ಹೇಳಿದ್ದಾರೆ. ಇವರು ದೇವರಿಗೆ ಪ್ರಶ್ನೆ ಮಾಡಿದ ಮಹಾನ್ ಮೇಧಾವಿ ಆಗಿದ್ದಾರೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಮಾತನಾಡಿ, ದೇವರ ದಾಸಿಮಯ್ಯ ಅವರು 12ನೇ ಶತಮಾನದಲ್ಲಿ ಗದಗ ಜಿಲ್ಲೆಯಲ್ಲಿ ಜನಿಸಿದರು. ನೇಕಾರ ಸಮುದಾಯಕ್ಕೆ ಸೇರಿದ ದಾಸಿಮಯ್ಯ ದೇಹದ ಸಂರಕ್ಷಣೆಗಾಗಿ ವಸ್ತ್ರವನ್ನು ತಯಾರಿಸುವ ಮೂಲಕ ಸಮಾಜದ ಮಾನವ ಕುಲಕ್ಕೆಲ್ಲ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರ ವಚನ, ಜೀವನ ಶೈಲಿ, ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.



ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ನೇಯ್ಗೆ ಕಾಯಕದ ಅವತಾರ ಪುರುಷ ದೇವರ ದಾಸಿಮಯ್ಯ ಅವರಾಗಿದ್ದಾರೆ.

ಇವರು ಬಸವಾದಿ ಶರಣರಿಗೂ ಮಾರ್ಗದರ್ಶಕರಾಗಿದ್ದರು. ನೇಯ್ಗೆ ವೃತ್ತಿಯಿಂದ ಕಾಯಕಕ್ಕೆ ಬುನಾದಿ ಹಾಕಿದವರು, ವಚನ ಸಾಹಿತ್ಯಕ್ಕೆ ಪೀಠಿಕೆ ಬರೆದು ಮುನ್ನುಡಿ ಹಾಕಿದವರು ದೇವರ ದಾಸಿಮಯ್ಯ, ಶರಣರ ತತ್ವಗಳನ್ನು ಪ್ರಚಾರ ಮಾಡಿದವರಾಗಿದ್ದಾರೆ.

ಬಸವಣ್ಣನವರು ಕೂಡ ಇವರ ಕುರಿತು ವಚನಗಳಲ್ಲಿ ಹಾಡಿ ಹೊಗಳಿದ್ದಾರೆ ಎಂದು ದೇವರ ದಾಸಿಮಯ್ಯ ಅವರ ಕುರಿತು ಸವಿವರವಾಗಿ ಉಪನ್ಯಾಸ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯ ತಹಶೀಲ್ದಾರ್ ಎಲ್. ರಮೇಶ್ ಮಾತನಾಡಿ, ಮಹನೀಯರು ಹಾಕಿ ಕೊಟ್ಟಿರುವ ಉತ್ತಮ ಸಂದೇಶಗಳ ಹಾದಿಯಲ್ಲಿ ನಾವೆಲ್ಲರೂ ನಡೆಯಲು ಸರ್ಕಾರ ಈ ಜಯಂತಿಗಳನ್ನು ಆಚರಣೆ ಮಾಡುತ್ತ ಬರುತ್ತಿದೆ, ಈ ಮಹನೀಯರು ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುವಂತಹ ಕೆಲಸಗಳನ್ನು ಮಾಡಿದ್ದಾರೆ ಇವರುಗಳನ್ನು ನಾವೆಲ್ಲರೂ ಸ್ಮರಿಸೋಣ ಅವರ ಹಾದಿಯಲ್ಲಿ ನಡೆಯೋಣ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಡಾ. ಹೆಚ್.ಪಿ. ತಾರಾನಾಥ್, ತಹಶೀಲ್ದಾರ್ ರಾದ ಮೋಹನ್ ಕುಮಾರ್, ಹಾಸನ ನೌಕರ ಸಂಘದ ಗೌರವಾಧ್ಯಕ್ಷ ಈ. ಕೃಷ್ಣೇಗೌಡ ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಹಾಗೂ ಜಿಲ್ಲಾಧಿಕಾರಿ ಸಿ. ಸತ್ಯಭಾಮ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

# ಸರ್ಕಾರಿ ವೈದ್ಯಾಧಿಕಾರಿಗಳ ಸಂಘದಿಂದ ಪ್ರತಿಭಟನೆ

ಹಾಸನ: ಮಹಿಳಾ ವೈದ್ಯಾಧಿಕಾರಿಗಳ ವಿರುದ್ಧ ಆರ್‌ಟಿಐ ಕಾರ್ಯಕರ್ತರ ದುರ್ನಡತೆ ಖಂಡಿಸಿ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾ ಘಟಕದ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಆರ್‌ಟಿಐ ಕಾರ್ಯಕರ್ತ ಬಿ.ವಿ. ಭಾನುಪ್ರಕಾಶ್ ಸಲ್ಲಿಸಿದ್ದ ಮೇಲ್ಮನವಿಯನ್ನು ಇತ್ಯರ್ಥಗೊಳಿಸಲು ಮಾ. 29 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಬಂದಿದ್ದ ಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ನಿಸಾರ್ ಫಾತಿಮಾ ಅವರ ಎದುರು ಭಾನುಪ್ರಕಾಶ್, ಏರು ಧ್ವನಿಯಲ್ಲಿ ಮಾತನಾಡಿದ್ದಾರೆ. ಅವರ ಘನತೆಗೆ ಧಕ್ಕೆ ತರುವಂತೆ ವರ್ತಿಸಿರುವುದು ಖಂಡನೀಯ ಎಂದರು.




# ಜೆಡಿಎಸ್ ತೆಕ್ಕೆಗೆ ಬೆಳಗೀಹಳ್ಳಿ ಪಿಕೆಪಿಎಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಬೆಳಗೀಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 5 ವರ್ಷಗಳ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 9 ಅಭ್ಯರ್ಥಿಗಳು ಜಯಗಳಿಸಿದ್ದಾರೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ನೂತನ ನಿರ್ದೇಶಕರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಪರಿಶ್ರಮದಿಂದ ಚುನಾವಣೆಯಲ್ಲಿ 12 ಸ್ಥಾನಗಳ ಪೈಕಿ 9 ಸ್ಥಾನಗಳಲ್ಲಿ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ. ನೂತನ ನಿರ್ದೇಶಕರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.



ನಿರ್ದೇಶಕ ತೋಟಿ ನಾಗರಾಜ್ ಮಾತನಾಡಿ, ವಿರೋಧ ಪಕ್ಷದ ನಾಯಕರು ಹೇಗಾದರೂ ಮಾಡಿ ಅಧಿಕಾರ ಹಿಡಿಯಬೇಕೆಂದು ಸಾಕಷ್ಟು ಪ್ರಯತ್ನಪಟ್ಟರು. ಆದರೆ ಶಾಸಕರ ಸಹಕಾರದಿಂದ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಭಾರಿ ಬಹುಮತದೊಂದಿಗೆ ಆಯ್ಕೆಯಾಗಿದ್ದಾರೆ ಎಂದರು.

# ದೈಹಿಕ ಅನಾರೋಗ್ಯ ಶೇ. 10-ಮಾನಸಿಕ ಕಾಯಿಲೆ ಶೇ. 90

ಚೇತನ್ ಗುರೂಜಿ, ಬಸವ ಯೋಗ ಕೇಂದ್ರ, ಅಡಗೂರು

ಕನ್ನಡ ಪೋಸ್ಟ್ ಹೆಲ್ತ್



ಲೇಖನದ ಶೀರ್ಷಿಕೆ ವಿಚಿತ್ರ ಅನ್ನಿಸಬಹುದು ಆದರೂ ಇದು ವಾಸ್ತವ. ದೈಹಿಕ ಕಾಯಿಲೆಗಳಿಗಿಂತ ಮಾನಸಿಕ ಕಾಯಿಲೆಗಳಿಂದಲೇ ಬಳಲುತ್ತಿರುವ ಸಂಖ್ಯೆ ಹೆಚ್ಚಿದೆ ಎಂದು ತಜ್ಞ ವೈದ್ಯರು ಹೇಳುತ್ತಾರೆ. ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ದೇಶಗಳಾದ ಅಮೆರಿಕ, ಜರ್ಮನ್, ಜಪಾನ್, ರಷ್ಯಾ ಹೀಗೆ ಹಲವಾರು ದೇಶಗಳಲ್ಲಿ ಅಲ್ಲಿನ ಜನರು ಆರೋಗ್ಯದ ಬಗ್ಗೆ ಬಹಳ ಕಾಳಜಿ ವಹಿಸುತ್ತಾರೆ. ಆದ್ದರಿಂದಲೇ ಅವರು ಒಬ್ಬ ರೋಗಿಗೆ ಚಿಕಿತ್ಸೆಗಿಂತಲೂ ಮೊದಲು ಅವರ ಜೊತೆ ಕೌನ್ಸಿಲಿಂಗ್ ಮಾಡುತ್ತಾರೆ. ಆ ನಂತರ ಚಿಕಿತ್ಸೆಯ ಅವಶ್ಯಕತೆ ಬಿದ್ದರೆ ಮಾತ್ರ ಔಷಧಿ ಮಾತ್ರೆಗಳನ್ನು ಕೊಡುತ್ತಾರೆ. ಈ ಎಲ್ಲಾ ವಿಚಾರಗಳು ಮೊದಲು ಗೊತ್ತಿದ್ದಿದ್ದೆ ಭಾರತೀಯರಿಗೆ. ಇಂದು ನಮ್ಮ ವ್ಯವಸ್ಥೆ ಯಾವ ಕಡೆ ಸಾಗುತ್ತಿದೆ ಎಂದು ಯೋಚಿಸುವಂತಹ ಸ್ಥಿತಿಗೆ ಬಂದು ತಲುಪಿದ್ದೇವೆ. ಅದಕ್ಕೆ ಕಾರಣ ಮನುಷ್ಯನಿಗೆ ದೈಹಿಕ ಬಲಕ್ಕಿಂತಲೂ ಮನೋಬಲವೇ ಬಹಳ ಮುಖ್ಯವೆಂದು ತಿಳಿದಂತಹ ಭಾರತೀಯರಾದ ನಾವುಗಳು ಇವತ್ತಿನ ಹಣದ ವ್ಯಾಮೋಹದಲ್ಲಿ ಮುಳುಗಿ ನಮಗೆ ನಾವೇ ಮೋಸ ಮಾಡಿಕೊಳ್ಳುತ್ತಿದ್ದೇವೆ ಎಂದು ಅನಿಸುತ್ತದೆ. ಕೇವಲ ದೇಹಕ್ಕೆ ಚಿಕಿತ್ಸೆ ನೀಡುತ್ತಾ ಬರುತ್ತಿರುವುದು ಬಹಳ ಆಘಾತಕಾರಿ ಸಂಗತಿ. ಈಗ ನಾವು ಬದಲಾಗಬೇಕಾದ ಸಂದಿಗ್ಧ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ದೇಹಕ್ಕೆ ಔಷಧಿ ಕೊಡುತ್ತಾ ಹೋದರೆ ಮನುಷ್ಯ ಆರೋಗ್ಯವಂತನಾಗಲು ಸಾಧ್ಯವಿಲ್ಲದ ಮಾತು. ಅಂದರೆ ಅವನಿಗೆ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸ ಮಾಡಬೇಕು. ಇಲ್ಲವಾದರೆ ಅವನು ಖಂಡಿತ ಆರೋಗ್ಯವಂತನಾಗಲು ಸಾಧ್ಯವಾಗುವುದಿಲ್ಲ. ಇದು ನಮ್ಮೆಲ್ಲರಿಗೂ ಗೊತ್ತಿದ್ದರೂ ಸುಮ್ಮನಿದ್ದೇವೆ ಎಂದು ಅನಿಸುತ್ತದೆ. ಅಮೆರಿಕ ದೇಶದಲ್ಲಿ ಹತ್ತಿರದ ಯಾರಾದರೂ ಸಂಬಂಧಿಕರು ಅಥವಾ ಮಕ್ಕಳು ಇದ್ದರೆ ಕೇಳಿ ನೋಡಿ ಅಲ್ಲಿನ ಜನರ ಆರೋಗ್ಯದ ಬಗ್ಗೆ ವೈದ್ಯರು ಮತ್ತು ಸರ್ಕಾರ ಎಷ್ಟು ಕಾಳಜಿ ವಹಿಸುತ್ತದೆ ಎಂದು ಗೊತ್ತಾಗುತ್ತದೆ. ಕಾಯಿಲೆ ಬಂದ ವ್ಯಕ್ತಿಗೆ ಒಬ್ಬ ಡಾಕ್ಟರ್ 20 ರಿಂದ 30 ನಿಮಿಷಗಳ ಸಮಯ ಕೊಡಬೇಕು. ಕೌನ್ಸಿಲಿಂಗ್ ಮಾಡಿ ನಂತರವೇ ಅವಶ್ಯ ಬಿದ್ದರೆ ಮಾತ್ರ ಇಂಜೆಕ್ಷನ್ ಕೊಡುವುದು. ಇನ್ನು ಎರಡು ಮೂರು ವೈದ್ಯರ ಸಲಹೆ ಪಡೆದು ಅವರು ಖಚಿತಪಡಿಸಿದರೆ ಮಾತ್ರವೇ ಚಿಕಿತ್ಸೆ ಪಡೆಯುತ್ತಾರೆ. ಅಲ್ಲದೆ ಆಪರೇಷನ್ ಅಂತ ದೊಡ್ಡ ಅವಶ್ಯಕತೆ ಇದೆ ಎಂದು ಹೇಳಿದರೆ ಮಾತ್ರ ಮಾಡಿಸಿಕೊಳ್ಳುತ್ತಾರೆ. ಅಲ್ಲಿನ ಜನರು ಅಷ್ಟು ಪ್ರಜ್ಞಾವಂತರು ಮತ್ತು ವೈದ್ಯರು ಸಹ ಉತ್ತಮ ಸಲಹೆ ಸಹಕಾರವನ್ನು ಕೊಡುತ್ತಾರೆ.

ಆಲೂರಿನಲ್ಲಿ ಶಿಬಿರ ನಡೆಯುತ್ತಿದ್ದಾಗ ಯೋಗಕ್ಕೆ ಬರುತ್ತಿದ್ದ ಆತ್ಮೀಯ ದಂಪತಿಯ ಮಗ ಜರ್ಮನಿಯಲ್ಲಿ ಇದ್ದಾರೆ. ಅವರ ಸೊಸೆಗೆ 9 ತಿಂಗಳು ತುಂಬಿದೆ ಎಂದು ಡಾಕ್ಟರ್ ಹತ್ತಿರ ತಿಳಿಸಿದ್ದಾರೆ. ಅವರು ನಿಮಗೆ ಹೆರಿಗೆ ನೋವು ಬಂದಿದೆಯೇ ಎಂದು ಕೇಳಿದಾಗ ಇಲ್ಲ ಎಂಬ ಉತ್ತರ ಬಂದಿದೆ. ಹಾಗಾದರೆ ನೋವು ಬಂದಾಗ ಬನ್ನಿ ಎಂದು ಹೇಳಿದ್ದಾರೆ. ನಂತರದಲ್ಲಿ ಸಹಜ ಹೆರಿಗೆ ಆಗಿದೆ ಎಂದು ಹೇಳುತ್ತಿದ್ದರು. ಜೊತೆಗೆ ಅಲ್ಲಿನ ವೈದ್ಯಕೀಯ ವ್ಯವಸ್ಥೆ ಮಾನವೀಯತೆಗೆ ಬಹಳ ಪ್ರಾಧಾನ್ಯತೆ ಕೊಡುತ್ತದೆ ಎಂದು ತಿಳಿಸಿದರು. ಅವರ ಮಾತುಗಳನ್ನು ಕೇಳಿ ನಮ್ಮಲ್ಲೂ ಇಂತಹ ಮಾನವೀಯ ಗುಣಗಳು ಇರುವವರು ಇನ್ನೂ ಹೆಚ್ಚಾಗಬೇಕಿದೆ ಎಂದು ಮನಸ್ಸಿನಲ್ಲಿ ಅಂದುಕೊಂಡೆ.

## ಬದಲಾಗಲಿ ಜೀವನ ಶೈಲಿ

ಬೆಳಿಗ್ಗೆ 5 ಗಂಟೆಗೆ ದೂರದ ಪ್ರಯಾಣವನ್ನು ಮಾಡಬೇಕು ಎಂದು ಹಿಂದಿನ ರಾತ್ರಿ ನಿರ್ಧಾರ ಮಾಡಿರುತ್ತೀರಿ. ಜೊತೆಗೆ ಅಲಾರಾಂ ಕೂಡ ಇಡುತ್ತೀರಿ. ನೀವೇ ಪ್ರಾಮಾಣಿಕವಾಗಿ ಯೋಚನೆ ಮಾಡಿ. ಅಲಾರಾಂ ಆದಾಗ ಎಚ್ಚರವಾಗುತ್ತದೋ ಅಥವಾ ಅದಕ್ಕಿಂತ ಮುಂಚೆ ಎಚ್ಚರವಾಗುತ್ತದೋ ಎಂದು. ಬಹಳಷ್ಟು ಜನರು ಅಲಾರಾಂಗಿಂತ ಮೊದಲೇ ಎಚ್ಚರವಾಗಿತ್ತು ಎನ್ನುತ್ತಾರೆ. ಇಂತಹ ಕೆಲಸ ಆಗಲೇಬೇಕೆಂದು ದೃಢ ನಿಶ್ಚಯ ಮಾಡಿದರೆ ಅದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ.

ಯಾವಾಗಲೂ ನಮಗೆ ನಾವೇ ನನ್ನಿಂದ ಇದು ಸಾಧ್ಯವಿಲ್ಲ ಏನು ಮಾಡಲಾಗುವುದಿಲ್ಲ ನನ್ನ ಕಥೆ ಇಲ್ಲಿಗೆ ಮುಗಿಯಿತು ನನ್ನ ದೇಹ ಯಾವುದಕ್ಕೂ ಸ್ಪಂದಿಸುತ್ತಿಲ್ಲ ಎಂದು ಅಂದುಕೊಂಡರೆ ಅಲ್ಲಿಗೆ ಕಥೆ ಮುಗಿಯಿತು. ಯಾರು ಏನೇ ಹೇಳಿದರು ಅಥವಾ ಔಷಧಿ ಕೊಟ್ಟರು ದೇಹ ಸ್ಪಂದಿಸುವುದಿಲ್ಲ. ಮನಸ್ಸಿನಲ್ಲಿ ಬಂದರೆ ಮಾತ್ರವೇ ಸರಿಯಾಗಲಿಕ್ಕೆ ಸಾಧ್ಯವಿದೆ ಎಂದು ನಂಬಿಕೆ ಇಡೋಣ. ಈಗಿನಿಂದಲೇ ನಾವುಗಳು ತಯಾರಾಗಬೇಕು. ಇನ್ನೊಂದು ಉದಾಹರಣೆ ಓದಿ ಎಲ್ಲೋ ದೂರದಲ್ಲಿ ಇರುವಂತಹ ನಿಮ್ಮ ಗೆಳೆಯ ಗೆಳತಿ ಅಥವಾ ಬಂಧುಗಳನ್ನ ನೆನಪಿಸಿಕೊಳ್ಳುತ್ತೀರಿ ಅಲ್ಲದೆ ಅವರ ವಿಚಾರವನ್ನು ಮನೆಯವರ ಜೊತೆ ಮಾತನಾಡುತ್ತಿರುತ್ತೀರಿ ಆ ಸಂದರ್ಭದಲ್ಲಿ ಆ ವ್ಯಕ್ತಿಗಳು ಅಲ್ಲಿಗೆ ಬರಬಹುದು ಆಗ ನಿಮ್ಮನ್ನೇ ನೆನಪಿಸುತ್ತಿದೆ ಬಂದೇ ಬಿಟ್ರಲ್ಲ ಎಂದು ಹೇಳುವುದನ್ನು ಕೇಳಿದ್ದೇವೆ. ಇನ್ನು ದೂರದಲ್ಲಿರುವ ವ್ಯಕ್ತಿಗಳು ನಿಮಗೆ ಫೋನ್ ಮಾಡಿದಾಗ ನೆನ್ನೆ ನಿನ್ನ ನೆನಪು ಬಂದಿತ್ತು ಆಗಲೇ ನಿನ್ನ ಫೋನ್ ಬಂದೇಬಿಟ್ಟಿತು ಎಂದು ಹೇಳುತ್ತೇವೆ. ದೂರದಲ್ಲಿ ಎಲ್ಲೋ ಇರುವ ವ್ಯಕ್ತಿಗೆ ಮನಸ್ಸಿನ ಭಾವನೆ ಅರ್ಥವಾಗುತ್ತಿದೆ ಎಂದರೇ ದೇಹದೊಳಗಿರುವಂತಹ ಅಂಗಾಂಗಗಳಿಗೆ ತಿಳಿಯುವುದಿಲ್ಲವೇ? ಗಂಭೀರವಾಗಿ ಯೋಚಿಸಬೇಕಷ್ಟೆ.

## ದಾರಿ ತಪ್ಪಿದ ಚಿಕಿತ್ಸಾ ವಿಧಾನ

ವಿಶ್ವಕ್ಕೆ ಮಾದರಿಯಾಗಿದ್ದ ನಮ್ಮ ಚಿಕಿತ್ಸಾ ವಿಧಾನ ಎಲ್ಲೋ ದಾರಿ ತಪ್ಪುತ್ತಿದೆ ಎಂದು ಅನಿಸುತ್ತಿದೆ. ಕಾರಣ ನಮ್ಮ ಆಯುರ್ವೇದ ಇತರ ದೇಶಗಳಲ್ಲಿ ಪ್ರಖ್ಯಾತಿ ಪಡೆದಿದೆ. ನಮ್ಮ ರೇಖಿ ಚಿಕಿತ್ಸೆ ಚೀನಾದಲ್ಲಿ ಹೆಚ್ಚು ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಧ್ಯಾನ ಪದ್ಧತಿ ಜಪಾನ್ ದೇಶದವರು ಹೆಚ್ಚು ಬಳಸಿಕೊಳ್ಳುತ್ತಿದ್ದಾರೆ. ಹೀಗೆ ಹೇಳುತ್ತಾ ಹೋದರೆ ದೊಡ್ಡಪಟ್ಟಿ ಇದೆ. ನಾವು ಕೇವಲ ಇಂಗ್ಲಿಷ್ ಔಷಧಗಳ ಮೇಲೆ ಅವಲಂಬಿತರಾಗುತ್ತಿದ್ದೇವೆ. ಆರೋಗ್ಯದ ಬಗ್ಗೆ ಜ್ಞಾನ ಇಲ್ಲದಿರುವುದು ಸಮಸ್ಯೆಗೆ ಮೂಲ ಕಾರಣವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248